**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ**

**ಸಿ.ಸಿ.ನಂಃ 654/2019**

ಪಿರ್ಯಾದುದಾರರು : ರಾಜ್ಯದ ಪರವಾಗಿಃ ಮೂಡಬಿದ್ರೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿ : ಜೊಸ್ವಿನ್ ಡಿಸೋಜಾ, 25 ವರ್ಷ,
ತಂದೆಃ ಸ್ಟ್ಯಾನಿ ಡಿಸೋಜಾ,
ವಾಸಃ ಕೊಪ್ಪಳ ಮನೆ, ಹೊಸಬೆಟ್ಟು ಚರ್ಚ್ ಬಳಿ,
ಹೊಸಬೆಟ್ಟು ಗ್ರಾಮ ಮತ್ತು ಅಂಚೆ,
ಮಂಗಳೂರು ತಾಲ್ಲೂಕು.

ನಾನು, ಮಾಲಾ ಸಿ., ಬಿ.ಎ., ಎಲ್.ಎಲ್.ಎಂ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ನಿಮ್ಮನ್ನುಃ

ಈ ಕೆಳಕಂಡಂತೆ ಆಪಾದನೆಗೆ ಗುರಿಪಡಿಸಿರುತ್ತೇನೆ.

ಆರೋಪಿಯಾದ ನೀವು, ದಿನಾಂಕಃ **07-01-2019** ರಂದು ಸಾಯಂಕಾಲ ಸುಮಾರು **7-30** ಗಂಟೆಯ ಸಮಯಕ್ಕೆ ಮೂಡಬಿದ್ರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಂಗಳೂರು ತಾಲ್ಲೂಕು ಮಾರ್ಪಾಡಿ ಗ್ರಾಮದ ಮಾಸ್ತಿಕಟ್ಟೆ ಎಂಬಲ್ಲಿ ಮಹಾಬಲ ಶೆಟ್ಟಿ ರವರು ಮೂಡಬಿದ್ರೆಯಿಂದ ಹೊಸಬೆಟ್ಟು ಕಡೆಗೆ ನಡೆದುಕೊಂಡು ಬರುತ್ತಿರುವಾಗ ನಿಮ್ಮ ಬಾಬ್ತು **ಕೆಎ-19-ಇಎಂ-9866** ನೇ ನಂಬ್ರದ ಮೋಟಾರ್ ಸೈಕಲ್ ನಲ್ಲಿ ನೀವು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ರಸ್ತೆಯ ತೀರಾ ಬಲಬದಿಗೆ ಬಂದು ನಡೆದುಕೊಂಡು ಹೋಗುತ್ತಿದ್ದ ಮಹಾಬಲ ಶೆಟ್ಟಿ ರವರಿಗೆ ಡಿಕ್ಕಿಪಡಿಸಿದ ಪರಿಣಾಮ ಅವರು ರಸ್ತೆಗೆ ಎಸೆಯಲ್ಪಟ್ಟು ಅವರ ಎಡಕಾಲಿನ ಮೂಳೆ ಮುರಿತವಾಗಿದ್ದು ದೇಹದ ಇತರ ಭಾಗಗಳಿಗೆ ತರಚಿದ ಗಾಯವಾಗಿದ್ದು, ಅವರನ್ನು ಮಂಗಳೂರಿನ ಎ.ಜೆ. ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆಯಲ್ಲಿದ್ದವರು ಅವರು ಚಿಕಿತ್ಸೆ ಫಲಕಾಗಿಯಾಗದೆ ದಿನಾಂಕ **09-01-2019** ರಂದು ಬೆಳಿಗ್ಗೆ **10-44** ಗಂಟೆಗೆ ಮೃತಪಟ್ಟಿರುತ್ತಾರೆ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **279** ಮತ್ತು **304**(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಅಪಘಾತಪಡಿಸಿದ ಮೋಟಾರ್ ಸೈಕಲ್ ಗೆ ವಾಯು ಮಾಲಿನ್ಯ ಪತ್ರ ಹೊಂದಿರುವುದಿಲ್ಲ.

ಆದ್ದರಿಂದ ಈ ಮೂಲಕ ನೀವು ಐ.ಎಂ.ವಿ. ಆ್ಯಕ್ಟ್ ಕಲಂ **115** ಜೊತೆಗೆ **190(2)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಪ್ರಶ್ನೆ 1. ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆ 2. ನೀವು ಮೇಲ್ಕಂಡ ಆರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಛಿಸುತ್ತೀರಾ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಅಥರ್ವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆತನು ನೀಡಿದ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ಯಥಾವತ್ತಾಗಿ ದಾಖಲಿಸಿರುತ್ತೇನೆ)

ಸಹಿ/-

ದಿನಾಂಕಃ **06-06-2022**

(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ